ಅಕ್ಷರಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



'ಸೀಡ್ ಬಾಲ್' ಗಿಡಬೆಳೆಸುವ ಒಂದು ವಿಶಿಷ್ಟ ಹಾಗೂ ಸರಳ ವಿಧಾನ. ಮಣ್ಣು, ದನದ ಸಗಣಿ ಬೆರೆಸಿ, ಬೀಜಗಳನ್ನು ಹಾಕಿ ಕಟ್ಟಿದ ಮಣ್ಣಿನ ಉಂಡೆಯೇ ಸೀಡ್‌ಬಾಲ್. ನೆರಳಿನಲ್ಲಿ ಒಣಗಿಸಿಟ್ಟ ಈ ಬಾಲನ್ನು ಖಾಲಿ ಜಾಗದಲ್ಲಿ ಎಸೆಯುವ ಪರಿಸರ ಪ್ರೇಮಿ ಚಟುವಟಿಕೆಯಲ್ಲಿ ಅನೇಕ ಸಂಘ ಸಂಸ್ಥೆಗಳು ನಡೆಸುತ್ತಿವೆ. ನಮ್ಮೂರಲ್ಲೂ ನಾವ್ಯಾಕೆ ಮಾಡಬಾರದು?

ಸಂಪುಟ : 37 ಸಂಚಿಕೆ : 23 ದುರ್ಮುಖಿ–ಆಷಾಢ ಕಲಿಯುಗಾಬ್ದ 5117 1–8–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

## ಇಸ್ಲಾಂ ಉಗ್ರವಾದದಿಂದ ತತ್ತರಿಸುತ್ತಿದೆ ವಿಶ್ವ

ಕೇರಳದ ಕಾಸರಗೋಡಿನ ಮೂಲದ ದಂತ ವೈದ್ಯಕೀಯ ಶಿಕ್ಷಣ ವ್ಯಾಸಂಗ ಮಾಡುತ್ತಿದ್ದ ನಿಮಿಷಾ ಎಂಬಾಕೆ ಈಝಾ ಎಂಬಾತನನ್ನು ಮದುವೆಯಾಗಿ ಈಗ ಸ್ವಗ್ರಾಮದಿಂದ ಕಾಣೆಯಾಗಿದ್ದಾಳೆ. ಈಕೆ ಈಝಾ ಎಂಬ ಮುಸ್ಲಿಮನನ್ನು ಮದುವೆಯಾಗಲು ತೆಗೆದುಕೊಂಡದ್ದು ನಾಲ್ಕೇ ದಿನವಂತೆ. ಆಕೆಯ ಕಾಲೇಜಿನವರೇ ಇವಳ ಮದುವೆಯನ್ನು ಈಝಾ ಜೊತೆ ನಿಯೋಜಿಸಿದ್ದು ಎಂದು ಆಕೆಯ ತಾಯಿ ಬೇಸರಿಸಿಕೊಳ್ಳುತ್ತಾರೆ. ಹಾಗೆ ನೋಡಿದರೆ ಈಝಾ ಆ ಕಾಲೇಜಿನವನೇ ಅಲ್ಲ. ಇಸ್ಲಾಮಿಗೆ ಮತಾಂತರ ಹೊಂದಿದ್ದನ್ನು ಮಗಳಿಗೋಸ್ಕರ ಒಪ್ಪಿದ ತಾಯಿ ಕೆಲ ದಿನಗಳ ಹಿಂದಷ್ಟೇ ಪೊಲೀಸ್ ಠಾಣೆಯಲ್ಲಿ ಮಗಳು ಒಂದು ತಿಂಗಳಿನಿಂದ ಕಳೆದುಹೋಗಿದ್ದಾಳೆಂದು ದೂರು ನೀಡಿದ್ದಾರೆ. ಅದೇ ಪುಟ್ಟ ಊರಾದ ಕಾಸರಗೋಡಿನಿಂದ ಮುಸ್ಲಿಮ್ ಸಮುದಾಯಕ್ಕೆ ಸೇರಿದ ಸುಮಾರು 17 ಯುವಕರು ಹಲವಾರು ದಿನಗಳಿಂದ ಕಾಣೆಯಾಗಿದ್ದಾರೆಂದು ಅವರನ್ನು ಹುಡುಕುವ ಕೆಲಸ ಭರದಿಂದ ಸಾಗಿದೆ. ನಿಮಿಷಾಳ ಕಥೆಯಲ್ಲಿ ಒಂದು ಕಡೆ ಲವ್ ಜಿಹಾದ್ ನಡೆದಿದೆ, ಮತ್ತೊಂದು ಕಡೆ ಅದಕ್ಕಿಂತಲೂ ಭೀಕರವಾದ ಸಂಗತಿ ನಡೆದಿದೆಯೆಂದು ಅಂದಾಜಿಸಲಾಗಿದೆ. ಕಳೆದುಹೋಗಿರುವ 17 ಮಂದಿ ಇಸ್ಲಾಮಿಕ್ ಸ್ಟೇಟ್ (ಐಎಸ್) ಸೇರಿರಬಹುದು ಎಂಬ ಅನುಮಾನಗಳು ಪೊಲೀಸರನ್ನು ಕಾಡತೊಡಗಿದೆ. ಶೋಧಕಾರ್ಯ ಪ್ರಗತಿಯಲ್ಲಿದೆ. ಸಿರಿಯಾಕ್ಕೆ ತೆರಳಿರಬಹುದೆಂಬ ಅನುಮಾನಿತರಲ್ಲಿ ಕ್ರಿಶ್ಚಿಯನ್ ಮತದಿಂದ ಇಸ್ಲಾಮಿಗೆ ಮತಾಂತರಗೊಂಡವರೂ ಇದ್ದಾರೆ.



ಈ ಹಿಂದೆ, ಜನವರಿ 2016 ರಲ್ಲಿ ಸಿರಿಯಾ ದೇಶಕ್ಕೆ ನಾಲ್ಕು ಮಂದಿ ಮುಸ್ಲಿಮ್ ಯುವಕರು ಐಎಸ್ ಸೇರಲೆಂದು ಭಾರತದಿಂದ ತೆರಳಿದ್ದರು. ಅವರು ಐಎಸ್ ಸೇರುವ ಮುನ್ನವೇ, ಸಿರಿಯಾದ ಪೊಲೀಸರು ಅವರನ್ನು ಹಿಡಿದು ಜೈಲಿಗೆ ದೂಡಿದ್ದರು. ಅಲ್ಲಿಯವರೆಗೂ ಸುಮಾರು 23 ಮಂದಿ ಭಾರತೀಯ ಮುಸ್ಲಿಮರು ಐಎಸ್ ಸೇರಿದ್ದಾಗಿ ಸಿರಿಯಾದ ಉಪಪ್ರಧಾನಿ ಮಾಉಲೆಮ್ ತಿಳಿಸಿದ್ದರು. ಅವರಲ್ಲಿ ಮುಂಬೈ, ಕರ್ನಾಟಕದ ಭಟ್ಕಳ, ತೆಲಂಗಾಣ, ಆಂಧ್ರ, ಕೇರಳದ ಮುಸ್ಲಿಮರು ಭಾಗಿಯಾಗಿದ್ದರು. ಉತ್ತರಪ್ರದೇಶ, ಬಿಹಾರದ ಮೂಲದಿಂದಲೂ ಹಲವರು ಸಿರಿಯಾಕ್ಕೆ ತೆರಳಿ ಯುದ್ಧಗಳಲ್ಲಿ, ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ ಎಂದು ರಾಷ್ಟ್ರೀಯ ತನಿಖಾ ದಳ, ಗುಪ್ತಚರ ಇಲಾಖೆ ಈಗಾಗಲೇ ತಿಳಿಸಿದೆ.

ಕೆಲ ವರ್ಷಗಳ ಹಿಂದೆ ಪ್ರಾರಂಭವಾದ ಲವ್ ಜಿಹಾದ್ ಎಂಬ ಭೂತ ನಮೆಲ್ಲರನೂ ಇಂದಿಗೂ ಕಾಡುತ್ತಿದೆ. ಹಣ, ಪ್ರೀತಿ ಇತ್ಯಾದಿ ಆಮಿಷಗಳನ್ನು ಒಳಗೊಂಡು ಇಂದಿಗೂ ಈ ಲವ್ ಜಿಹಾದ್ ನಡೆಯುತ್ತಿದೆ. ಅಮಾಯಕ ಹೆಣ್ಣುಮಕ್ಕಳು ಬಲಿಯಾಗುತ್ತಿದ್ದಾರೆ. ಕಳೆದ 5 ವರ್ಷಗಳಲ್ಲಿ ಕೇರಳವೊಂದರಲ್ಲೇ 5,000ದಷ್ಟು ಹೆಣ್ಣು ಮಕ್ಕಳು ಇಸ್ಲಾಮಿಗೆ ಮತಾಂತರವಾಗಿದ್ದಾರೆ ಎಂದು ಇತ್ತೀಚಿನ ವರದಿಯೊಂದು ಹೇಳುತ್ತದೆ. ಹೆಣ್ಣು ಮಕ್ಕಳಲ್ಲಿ ಈ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಎಲ್ಲೆಡೆ ನಡೆಯಬೇಕಿದೆ.

### ಐಎಸ್ ಹುಟ್ಟು ಹಾಗೂ ಅದರ ಭೀಕರತೆ

ಅಮೆರಿಕದ ಅವಳಿ ಗೋಪುರದ ಮೇಲೆ ದಾಳಿ ಮಾಡಿದ ಅಲ್–ಖೈದಾ ಸಂಘಟನೆಯ ಒಸಾಮಾ ಬಿನ್ ಲಾಡೆನ್‌ನನ್ನು ಸಂಹಾರ ಮಾಡಿದ ಬಳಿಕ ಅಂತಹದ್ದೊಂದು ಸಂಘಟನೆಯೂ ಕುಸಿಯಿತು, ಭಯೋತ್ಪಾದಕ ಚಟುವಟಿಕೆಗಳು ಕಡಿಮೆಯಾಗುತ್ತವೆ ಎಂಬ ಭರವಸೆಯನ್ನು ಘಾಸಿಗೊಳಿಸಿದ್ದೇ ಐಎಸ್‌ಐಎಸ್ ಎಂಬುದರ ಉದ್ಭವದಿಂದ. ಇಡೀ ವಿಶ್ವದಲ್ಲಿ ಮುಸ್ಲಿಮರೇ ಬಾಳಬೇಕು ಹಾಗೂ ಮತ್ತಾರಿಗೂ ಬದುಕುವ ಹಕ್ಕಿಲ್ಲವೆಂಬಂತೆ ತನ್ನ ಕೆಲಸ ಮಾಡುತ್ತಿದೆ ಐಎಸ್. ಷರಿಯಾ ಕಾನೂನು ಎಲ್ಲೆಡೆ ಜಾರಿಗೆ ಬರಬೇಕು ಹಾಗೂ ಖಲಿಫ್ (ಅಲ್ಲಾಹುವಿನ ದೂತ) ಆಳ್ವಿಕೆ ವಿಶ್ವದಲ್ಲಿ ಹರಡಬೇಕೆಂಬುದು ಐಎಸ್ ಉದ್ದೇಶ.

### 'ಭಯೋತ್ಪಾದನೆಗೆ ರಿಲಿಜನ್ ಇಲ್ಲ' ಎನ್ನುವ ಸುಳ್ಳು ವಾದ

ಒಟ್ಟಿನಲ್ಲಿ, ವಿಶ್ವದೆಲ್ಲೆಡೆ ಇಸ್ಲಾಮಿಕ್ ಭಯೋತ್ಪಾದಕರ ವಿಧ್ವಂಸಕ ಕೃತ್ಯಗಳು ಹೆಚ್ಚುತ್ತಿವೆ. ಆದರೂ ತುಷ್ಟೀಕರಣದ ಪ್ರಭಾವದಿಂದಾಗಿ ಹೆಚ್ಚಿನ ದೇಶಗಳಲ್ಲಿ ಯಾವುದೇ ಕಟು ನಿರ್ಧಾರ ತೆಗೆದುಕೊಳ್ಳುವ ಸೂಚನೆ ಸಿಗುತ್ತಿಲ್ಲ. ಅಮೆರಿಕಾದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿರುವ ಹಿಲ್ಲರಿ ಕ್ಲಿಂಟನ್‌ನಿಂದ ಹಿಡಿದು ಇಸ್ಲಾಂ ಬಗ್ಗೆ ಸದಾ ಮೃದುದೋರಣೆಗಳನ್ನು ತಾಳುವ ಎಲ್ಲರೂ ಹೇಳುವುದು "ಭಯೋತ್ಪಾದನೆಗೆ ಯಾವುದೇ ರಿಲಿಜನ್ ಇಲ್ಲ" ಎಂದು. ಫ್ರಾನ್ಸ್ ದಾಳಿಯಲ್ಲಿ ಬಂದೂಕುಧಾರಿ "ಅಲ್ಲಾಹು ಅಕ್ಬರ್" ಎನ್ನುತ್ತಲೇ ಜನರ ಜೀವದ ಜೊತೆ ಆಟವಾಡಿದನಾದರೂ, ಬಾಂಗ್ಲಾದೇಶದ ರಾಜಧಾನಿ ಢಾಕಾ ನಗರದಲ್ಲಿ ಒಂದು ಉಪಹಾರಗೃಹದೊಳಗೆ ನುಗ್ಗಿ ಕುರಾನ್ ಪಠಣ ಮಾಡದಿದ್ದವರನ್ನು ಅಮಾನುಷವಾಗಿ ಗುಂಡಿಕ್ಕಿ ಕೊಂದಾಗಲೂ ಭಯೋತ್ಪಾದನೆಗೆ ಯಾವುದೇ ರಿಲಿಜನ್ ಇಲ್ಲವೆನ್ನುವುದು ಮೂರ್ಖತನವಾದೀತು. ಆದರೂ, ವಿವಿಧ ರಾಜಕೀಯ ನಾಯಕರು ಅದೇ ಮಂತ್ರ ಪಠಿಸುತ್ತಿರುವುದು ವಿಪರ್ಯಾಸ. ಮುಸಲ್ಮಾನ ವೋಟ್‌ಬ್ಯಾಂಕ್ ಅಂತೂ ಸದಾ ಒಗ್ಗಟ್ಟಾಗಿಯೇ ಇರುವುದರಿಂದ ತಮ್ಮ ಮೇಲೆ ಕಠಿಣ ಕ್ರಮ ತೆಗೆದುಕೊಂಡಾರು ಎಂಬ ಅಂಜಿಕೆಯೂ ಭಯೋತ್ಪಾದಕರಿಗೂ ಇಲ್ಲ.

### ಭಯೋತ್ಪಾದನೆಯನ್ನು ಆಯ್ದುಕೊಳ್ಳಲು ಕಾರಣ

ಸಾಮಾನ್ಯವಾಗಿ ಬಡತನ, ಅನಕ್ಷರತೆಯೇ ಮುಸ್ಲಿಮರು ಭಯೋತ್ಪಾದನೆಯ ದಾರಿ ಹಿಡಿಯಲು ಕಾರಣ ಎಂದು ವಾದಿಸುವವರು ಇದ್ದಾರೆ. ಆದರೆ, ಅದಂತೂ ಕಾರಣವಲ್ಲ ಎಂಬುದು ಇತ್ತೀಚಿಗಿನ ಭಯೋತ್ಪಾದಕರನ್ನು ನೋಡಿದರೆ ಗೊತ್ತಾಗುತ್ತದೆ. ಅವರೆಲ್ಲರೂ ವಿದ್ಯಾವಂತರೇ, ಒಳ್ಳೆಯ ಕೆಲಸದಲ್ಲಿದ್ದವರೇ. ಬೆಂಗಳೂರಿನಲ್ಲಿ ಒಂದು ಪ್ರತಿಷ್ಠಿತ ಸಾಫ್ಟ್‌ವೇರ್ ಕಂಪನಿಯಲ್ಲಿ ದುಡಿಯುತ್ತಿದ್ದ ಮೆಹದಿ ಎಂಬುವವನು ಇಲ್ಲಿಂದಲೇ ಐಎಸ್‌ನ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದ ಸುದ್ದಿ ನಮಗೆ ತಿಳಿದಿದೆ. ಭಾರತದಲ್ಲಿನ ಮುಸ್ಲಿಮರನ್ನು ವಿನಾಕಾರಣ ಬಂಧಿಸಿ ಪ್ರಶ್ನಿಸಲಾಗುತ್ತಿದೆ ಎಂದು ಆರೋಪಿಸುವ ಬುದ್ಧಿಜೀವಿ ಪಡೆ, ವಿಶ್ವದೆಲ್ಲೆಡೆ ನಡೆಯುವ ಹಿಂಸಾ ಕೃತ್ಯಗಳಲ್ಲಿ ಮಡಿದ ಅಮಾಯಕರ ಪರವಾಗಿ ಎಂದೂ ನಿಲ್ಲುವುದಿಲ್ಲ.

ಇತ್ತೀಚೆಗೆ ನಡೆದ ಢಾಕಾ ದಾಳಿಯಲ್ಲಿ ಬಂದೂಕನ್ನು ಹಿಡಿದು ಕೊಂದ ಯುವಕ ಜಾಕೀರ್ ನಾಯಕನ ಹಿಂಬಾಲಕನಾಗಿದ್ದ ಎಂದು ತಿಳಿದುಬಂದಿದೆ. ಬಾಂಗ್ಲಾದೇಶದ ಸಚಿವಾಲಯವೂ ಜಾಕೀರ್ ನಾಯಕನ ವಿರುದ್ಧ ಭಾರತ ಕ್ರಮಕೈಗೊಳ್ಳಬೇಕೆಂದು ಕೇಳಿಕೊಂಡಿತ್ತು. ಪೀಸ್ ಟಿವಿಯಲ್ಲಿನ ಜಾಕೀರ್ ನಾಯಕನ ಭಾಷಣಗಳು ಯಾವ ಮಟ್ಟಕ್ಕೆ ಪ್ರಚೋದನಾಕಾರಿ ಎಂದರೆ ಅವನ ಪ್ರಕಾರ ಮುಸ್ಲಿಮರೆಲ್ಲರೂ ಭಯೋತ್ಪಾದಕರಾಗಬೇಕು. ಅಲ್ಲದೇ ಇಂದು ಭಯೋತ್ಪಾದಕನೆಂದು ಕರೆಯಲ್ಪಡುವ ವ್ಯಕ್ತಿಯನ್ನು ಮುಂದೊಂದು ದಿನ ಶ್ರೇಷ್ಠರನ್ನಾಗಿ ಕಾಣುತ್ತದೆ ಎಂದೂ ಈತ ನುಡಿಯುತ್ತಾನೆ. ಜಾಕೀರ್ ನಾಯಕ ಮುಂಬೈಯಲ್ಲಿ ನಡೆಸುತ್ತಿರುವ

### ಐಎಸ್ ಉಗ್ರರು ದಾಳಿ ನಡೆಸಿರುವ ಕೆಲ ಪ್ರಮುಖ ಘಟನೆಗಳು

2016 ಒಂದರಲ್ಲೇ ಐಎಸ್ ಹಲವು ದೇಶಗಳಲ್ಲಿ ಹಲವಾರು ಉಗ್ರದಾಳಿಗಳನ್ನು ನಡೆಸಿದೆ. 2014ರಿಂದ ಆರಂಭಗೊಂಡಿರುವ ಐಎಸ್ ಈವರೆಗೆ ಸಾವಿರಾರು ಜನರ ಬಲಿ ತೆಗೆದುಕೊಂಡಿದೆ.

- ಫ್ರಾನ್ಸ್‌ನಲ್ಲಿ ನವೆಂಬರ್ 2015 ರಿಂದ ಜುಲೈ 2016ರ ಒಳಗೆ ಎರಡು ಪ್ರಮುಖ ದಾಳಿಗಳು. ಒಟ್ಟು ಮೃತಪಟ್ಟವರ ಸಂಖ್ಯೆ 400.
- ಬಾಂಗ್ಲಾದೇಶದಲ್ಲಿ ಜುಲೈ 2016ರಲ್ಲಿ ಉಪಹಾರಗೃಹಕ್ಕೆ ನುಗ್ಗಿ ಬಂದೂಕಿನ ದಾಳಿಗೆ ಸತ್ತವರ ಸಂಖ್ಯೆ 50ಕ್ಕೂ ಹೆಚ್ಚು.
- ಜೂನ್ 2016ರಲ್ಲಿ ಟರ್ಕಿಯ ವಿಮಾನ ನಿಲ್ದಾಣದಲ್ಲಿ ಸತ್ತವರ ಸಂಖ್ಯೆ 240.
- ಮಾರ್ಚ್ 2016ರಲ್ಲಿ ಬೆಲ್ಜಿಯಂನ ಬ್ರಸ್ಸೆಲ್ಸ್‌ನ ಮೆಟ್ರೊ ಹಾಗೂ ವಿಮಾನನಿಲ್ದಾಣದಲ್ಲಿ ಸರಣಿ ಸ್ಫೋಟದಲ್ಲಿ 300ಕ್ಕೂ ಹೆಚ್ಚು ಮಂದಿ ಸತ್ತರು.
- ಅಮೆರಿಕಾದ ಒರ್ಲಾಂಡೊನ ಸಲಿಂಗಕಾಮಿಯರ ಕ್ಲಬ್ಬಿನ ಬಂದೂಕು ದಾಳಿಗೆ ಸತ್ತವರ ಸಂಖ್ಯೆ 50.

ಇವಲ್ಲದೇ ಸಿರಿಯಾ, ಯೆಮೆನ್, ಇರಾಕ್ ಮುಂತಾದ ಮುಸ್ಲಿಮ್ ದೇಶಗಳಲ್ಲಿಯೂ ಸತತ ದಾಳಿಗಳು ನಡೆಯುತ್ತಲೇ ಇವೆ.

ಇಸ್ಲಾಮಿಕ್ ಸಂಶೋಧನಾ ಸಂಸ್ಥೆಯಲ್ಲಿ ಪಾಲ್ಗೊಂಡಿದ್ದ ಯಜ್ಞದಾನಿ ಎಂಬುವವನು ಅದರಿಂದ ಪ್ರೇರಿತನಾಗಿ ಹೈದರಾಬಾದಿನಲ್ಲಿ ಅದೇ ತರಹದ ತಂಡವನ್ನು ರಚಿಸಿಕೊಂಡು ಐಎಸ್‌ಗೆ ಸೇರಿಸಲು ಜನರ ಹುಡುಕಾಟದಲ್ಲಿದ್ದ. ಬಳಿಕ ರಾಷ್ಟ್ರೀಯ ಭದ್ರತಾ ದಳಕ್ಕೆ ಸಿಕ್ಕುಬಿದ್ದ. ಕುರಾನಿನಲ್ಲಿರುವ ತೀವ್ರವಾದಿ ಅಸಹಿಷ್ಣು ಅಂಶಗಳೇ ಇಂದಿನ ಭಯೋತ್ಪಾನೆಗೆ ಕಾರಣ. ಮುಸ್ಲಿಮ್ ವಿದ್ಯಾವಂತರಾಗಿ ಕುರಾನನ್ನು ಚೆನ್ನಾಗಿ ಓದಿ ಅರ್ಥಮಾಡಿಕೊಂಡಾಗ ಮತ್ತು ಅವರಿಗೊಬ್ಬ ಧೂರ್ತ ಗುರು ಸಿಕ್ಕಾಗ ಅವರು ಭಯೋತ್ಪಾದಕರಾಗುವ ಸಾಧ್ಯತೆ ಹೆಚ್ಚು ಎನ್ನುವುದು ಇತ್ತೀಚೆಗೆ ಸ್ಪಷ್ಟವಾಗುತ್ತಿದೆ.

ಕಾಶ್ಮೀರದಲ್ಲಿ ನಡೆಯುತ್ತಿರುವುದೂ ಜಿಹಾದಿನ ಒಂದು ಮುಖವೇ. ಮಾನವ ಹಕ್ಕು ಉಲ್ಲಂಘನೆ, ನಿರುದ್ಯೋಗ ಎನ್ನುವುದೆಲ್ಲ ಬರಿಯ ಬೊಗಳೆ ಅಷ್ಟೇ. ಸರ್ಕಾರ ಮತ್ತು ಸೈನ್ಯ ಇದ್ಯಾವುದಕ್ಕೂ ಜಗ್ಗದೇ ಪ್ರತ್ಯೇಕತಾವಾದಿಗಳನ್ನು ಮಟ್ಟ ಹಾಕುತ್ತಿರುವುದು ಒಳ್ಳೆಯ ಬೆಳವಣಿಗೆ.

### ಸರ್ಕಾರ ಮತ್ತು ಮುಸ್ಲಿಮರ ಜವಾಬ್ದಾರಿ

ಮುಸ್ಲಿಮರೆಲ್ಲರೂ ಭಯೋತ್ಪಾದಕರಲ್ಲ ಎಂಬುದನ್ನು ಒಪ್ಪಬಹುದಾದರೂ, ಭಯೋತ್ಪಾದಕರೆಲ್ಲರೂ ಮುಸ್ಲಿಮರೇ ಎಂಬುದನ್ನು ನಿಸ್ಸಂದೇಹವಾಗಿ ಹೇಳಬಹುದಾಗಿದೆ. ಕಾನೂನನ್ನು ಬಿಗಿಗೊಳಿಸಿ ಇಸ್ಲಾಮಿಕ್ ತೀವ್ರವಾದಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳದಿದ್ದರೆ, ಇಂದು ಐಎಸ್ ಸೇರುತ್ತಿರುವವರು ಮುಂದೊಂದು ದಿನ ಭಾರತದಲ್ಲೂ ಅಂತಹದ್ದೊಂದು ತಂಡ ಕಟ್ಟಿಕೊಂಡಲ್ಲಿ ಆಶ್ಚರ್ಯವೇನಿಲ್ಲ. ಅದಕ್ಕೂ ಮೊದಲು ಮುಸ್ಲಿಂ ಸಮುದಾಯದಲ್ಲಿರುವ ಪ್ರಜ್ಞಾವಂತರು ಎಚ್ಚೆತ್ತುಕೊಳ್ಳಬೇಕಾಗಿದೆ. ಕುರಾನಿನಲ್ಲಿರುವ ತೀವ್ರವಾದಿ ಅಂಶಗಳನ್ನು ಸರಿಪಡಿಸಿ ಮನುಷ್ಯರಾಗಿ ಬಾಳಲು ಅದು ಸಹಕಾರಿಯಾಗುವಂತೆ ಮಾಡಬೇಕಾಗಿದೆ. ಅದಾಗದಿದ್ದಲ್ಲಿ ಇಂದಿರುವ ಕುರಾನ್ ವಿಶ್ವದೆಲ್ಲೆಡೆ ಭಯೋತ್ಪಾದಕರಿಗೆ ಪ್ರೇರಣೆ ಕೊಡುತ್ತಲೇ ಇರುತ್ತದೆ. ಹೆಚ್ಚು ಹೆಚ್ಚು ಭಯೋತ್ಪಾದಕರು ತಯಾರಾಗುತ್ತಲೇ ಇರುತ್ತಾರೆ. ಆದರೆ, ಕುರಾನನ್ನು ಬದಲಾಯಿಸಲು ಸಾಧ್ಯವೇ ಎನ್ನುವುದು ಪ್ರಶ್ನೆ. ಇಸ್ಲಾಮೆಂಬ ರಿಲಿಜನ್ನಿನಲ್ಲಿ ಕುರಾನ್ ದೇವರ ವಾಣಿಯಾದ್ದರಿಂದ ಅದನ್ನು ಮನುಷ್ಯರು ಬದಲಾಯಿಸಲು ಸಾಧ್ಯವಿಲ್ಲ. ಹಾಗಾದರೆ, ಪರಿಹಾರವೇನು? ಮುಸ್ಲಿಮರೇ ಉತ್ತರಿಸಬೇಕು.

ಸರ್ಕಾರವೂ ಮದರಸಾಗಳ ಮೇಲೆ ನಿಗಾ ಇಡಬೇಕು. ಹೊಸ ಮದರಸಾಗಳಿಗೆ ಅನುಮತಿ ನೀಡದೇ, ಈಗಿರುವ ಮದರಸಾಗಳನ್ನು ನಿಧಾನವಾಗಿ ಮುಖ್ಯವಾಹಿನಿಯ ಶಾಲೆಗಳಾಗುವಂತೆ ಮಾಡಬೇಕು. ಎಲ್ಲರಿಗೂ ಸಿಗುವ ಶಿಕ್ಷಣ ಮದರಸಾಗಳಲ್ಲಿಯೂ ಸಿಗುವಂತಾಗಬೇಕು. ಎಲ್ಲಿಯವರೆಗೆ ಮುಸ್ಲಿಮರು ತಾವೊಂದು ಪ್ರತ್ಯೇಕ ಗುಂಪು ಎಂದು ಗುರುತಿಸಿಕೊಳ್ಳುತ್ತಾರೋ, ಅಲ್ಲಿಯವರೆಗೆ ಮುಸ್ಲಿಂ ಪ್ರತ್ಯೇಕತಾವಾದಗಳೂ, ಭಯೋತ್ಪಾದಕ ಚಟುವಟಿಕೆಗಳೂ ನಡೆಯುತ್ತಲೇ ಇರುತ್ತವೆ. ಆದ್ದರಿಂದ ಎಲ್ಲ ಮುಸ್ಲಿಮರು ಮುಖ್ಯವಾಹಿನಿಗೆ ಬಂದು ಎಲ್ಲರಂತೆಯೇ ಬದುಕುವುದು ಇಂದಿನ ಅಗತ್ಯ.

# ಊರಿಗೇ ಗುರು ಕಸಿ ಕುಶಪ್ಪ

ನೆಲದ ಮಾತು

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಿಂದ 5 ಕಿ.ಮೀ. ದೂರದಲ್ಲಿ ಬೆಳಗಾವಿ ರಸ್ತೆಯಂಚಿಗೆ ಹರಡಿಕೊಂಡಿರುವ ತೇರಗಾಂವ್ ಎಂಬ ಪುಟ್ಟಹಳ್ಳಿ. ಮೂರು ಸಾವಿರ ಜನಸಂಖ್ಯೆಯ ಆ ಊರಿನಲ್ಲಿ ಕಬ್ಬು, ಭತ್ತ, ಮಾವು ಮುಖ್ಯ ಬೆಳೆಗಳು. ಈಗ ಆ ಊರಿನ ದಾರಿಯ ಇಕ್ಕೆಲದಲ್ಲಿಯೂ ಮಾವಿನ ಘಮಲು. ಊರು ಹತ್ತಿರವಾದಂತೆ ಮಾವಿನಗಿಡಗಳಿಂದ ತುಂಬಿದ ನೂರಾರು ನರ್ಸರಿಗಳು ಎದುರಾಗುತ್ತವೆ. ಇದು ತೇರಗಾಂವ್‌ನಲ್ಲಿ 35 ವರ್ಷಗಳ ಹಿಂದೆ ಮಾವಿನ ಕಸಿಯ ಉಪಕಸುಬನ್ನು ಆರಂಭಿಸಿದ ಕುಶಪ್ಪನವರ ಶ್ರಮದ ಫಲ.

ಬಾಲ್ಯದಲ್ಲಿ ಅಜ್ಜ ರತ್ನಗಿರಿಯಿಂದ ತಂದು ಬೆಳೆಸಿದ್ದ ಮಾವಿನ ಹಣ್ಣಿನ ರುಚಿಗೆ ಮರುಳಾದ ಅವರು ನಂತರ ಹೊಲದ ಉಸ್ತುವಾರಿಕೆ ಬಂದಾಗ ಅಂತಹುದೇ ಮಾವಿನ ಮರಗಳನ್ನು ಬೆಳೆಸಬೇಕೆಂಬ ಹಂಬಲ ತುಂಬಿಕೊಂಡಿತ್ತು. 40 ವರ್ಷಗಳ ಹಿಂದೆ ಮಾವಿನ ತೋಟವನ್ನು ನಿರ್ಮಿಸುವವರಿಗೆ ಬ್ಯಾಂಕ್ ಸಾಲ ಕೊಡುತ್ತಿತ್ತು. ಅದಕ್ಕೆಂದೇ ಆರು ಎಕರೆ ಹೊಲ ಖರೀದಿಸಿದರು. ಓಟೆ(ಬೀಜ)ಯಿಂದ ಗಿಡ ತಯಾರಿಸಿದರೆ ಫಲ ಕೊಡಲು ಹತ್ತಾರು ವರ್ಷ ಕಾಯಬೇಕಲ್ಲದೇ ಮೂಲ ಗಿಡದ ಗುಣ ಪೂರ್ಣ ಬರುವುದಿಲ್ಲ. ಕಲಮು ಮಾಡಿದ ಮಾವಿನ ಗಿಡಗಳನ್ನು ಖರೀದಿಸಬೇಕೆಂದರೆ ದೂರದ ರತ್ನಾಗಿರಿಗೆ ಹೋಗಬೇಕು. ಆದ್ದರಿಂದ ತಾವೇ ಕಸಿ ಮಾಡುವುದನ್ನು ಕಲಿಯಬಾರದೇಕೆ ಎನಿಸಿತು ಕುಶಪ್ಪನವರಿಗೆ. ಕೃಷಿ ಇಲಾಖೆಯ ಅಧಿಕಾರಿ ಆನಂದ ಪಟಾಣಕರ ಅವರಿಂದ ಕಸಿ ಮಾಡುವುದನ್ನು ಕಲಿತರು.

ಮೊದಲನೇ ವರ್ಷ ಕಸಿ ಮಾಡಿದ ಐವತ್ತೂ ಗಿಡಗಳು ಸತ್ತು ನಿರಾಶೆಗೀಡಾದರು. ಮರುವರ್ಷ ಇಬ್ಬರೂ ಸೇರಿ ಕಸಿ ಮಾಡೋಣ ಎಂದು ಅಧಿಕಾರಿಗಳು ಮತ್ತೆ ಹುರುಪು ತುಂಬಿದರು. ಒಂದು ಕಚ್ಚಾ ಮಾವಿನ ಗಿಡಕ್ಕೆ ಒಂದು ಟೊಂಗೆ ಕಟ್ಟುವ (ಬಡ್ಡಿ ಕಲಮಿ) ಪದ್ಧತಿಯಲ್ಲಿ 500 ಗಿಡಗಳನ್ನು ತಯಾರಿಸಿದರು. ತೆಗೆದುಕೊಂಡ ಕಾಳಜಿಯಿಂದಾಗಿ ಎಲ್ಲವೂ ಬದುಕಿದವು. ಗಿಡ ಮಾರಾಟ ಮಾಡಿ ಬಂದ ಹಣದಿಂದ ಹೊಲಕ್ಕಾಗಿ ಮಾಡಿದ ಸಾಲವೂ ತೀರಿತು. ಕುಶಪ್ಪನವರ ಸಾಹಸ ತೇರಗಾಂವಿನಲ್ಲಿ ಮನೆ ಮಾತಾಯಿತು!



‘ಕಲಮಿ ಗಿಡಗಳನ್ನು ಮೂರು ವರ್ಷ ನೀರು ಕೊಟ್ಟು ಆರೈಕೆ ಮಾಡಿ ಬೆಳೆಸಿದರೆ, ನೂರು ವರ್ಷದವರೆಗೆ ಹಣ್ಣು ಕೊಡುತ್ತವೆ. ಇಂಥ ಗಿಡ ಮತ್ಯಾವುದಿದೆ ಹೇಳ್ರೀ? ಅದಕ್ಕೆ ಫಲವತ್ತಾದ ಭೂಮಿ ಬೇಕೆಂಬುದೂ ಇಲ್ಲ, ಗುಡ್ಡದ ತಲೆ ಮೇಲೆ ನೆಟ್ಟರೂ ಬದುಕುತ್ತದೆ. ಹಣ್ಣುಗಳನ್ನು ಕೊಟ್ಟು ತಿಂದವರ ಬಾಯನ್ನು ಸಿಹಿಯಾಗಿಸುತ್ತದೆ’ ಎಂಬುದು ಕುಶಪ್ಪನವರ ಮಾತು.

**ಊರಿಗೇ ಗುರುವಾದರು:** ಒಂದು ವರ್ಷದ ಯಶಸ್ಸಿಗೆ ತೃಪ್ತರಾಗದ ಕುಶಪ್ಪನವರು ಧಾರವಾಡದ ಕೃಷಿ ವಿಶ್ವ ವಿದ್ಯಾಲಯದವರನ್ನು ಸಂಪರ್ಕಿಸಿ ಟೌನ್‌ಗ್ರಾಫ್ಟ್ (ಚೆಂಡ ಕಲಮಿ) ಮಾಡುವುದನ್ನೂ ಕಲಿತರು. ಜೂನ್ ತಿಂಗಳಿನಲ್ಲಿ ಮಣ್ಣು ಮತ್ತು ದಡ್ಡಿ ಗೊಬ್ಬರವನ್ನು ಸೇರಿಸಿದ ಲಕೋಟೆಯಲ್ಲಿ ಎರಡು ಹುಳಿ ಮಾವಿನ ಓಟೆ ಹಾಕುತ್ತಾರೆ. ಅದು 36 ದಿನಕ್ಕೆ ಕಸಿ ಕಟ್ಟಲು ಯೋಗ್ಯ ಗಿಡಗಳಾಗುತ್ತವೆ. 3 ತಿಂಗಳು ಪ್ಲಾಸ್ಟಿಕ್ ಸುತ್ತಿಡುತ್ತಾರೆ. ನಂತರ ಪ್ಲಾಸ್ಟಿಕ್ ಬಿಚ್ಚಿದರೆ ಮೂರು ಕಾಂಡಗಳೂ ಬೆಸೆದು ಒಂದೇ ಗಿಡವಾಗಿರುತ್ತದೆ. ಎರಡು ಕಚ್ಚಾ ಸಸ್ಯಗಳ ಬೇರು ಏಕಕಾಲಕ್ಕೆ ಒಂದೇ ಗಿಡಕ್ಕೆ ಆಹಾರ ಒದಗಿಸುವುದರಿಂದ ಕಲಮು ಮಾಡಿದ ಗಿಡ ಬಲು ಬೇಗನೇ ಬೆಳೆಯುತ್ತದೆ. ಕಸಿ ಕಟ್ಟಿದ ಗಿಡ ಸಾಯುವುದು ಕಡಿಮೆ. ಕಸಿ ಕಟ್ಟಿದ ಗಿಡಗಳಿಗೆ ಪ್ರತಿ ದಿನ ನೀರುಣಿಸಿ ಒಂದು ವರ್ಷ ಜೋಪಾನ ಮಾಡಿ ಬೆಳೆಸುತ್ತಾರೆ. ಇವರ ಗಿಡಗಳನ್ನರಸಿ ಹಲವು ಊರುಗಳಿಂದ ಜನರು ಬರಲಾರಂಭಿಸಿದರು. ಬೇಡಿಕೆ ಹೆಚ್ಚಾದಂತೆ ತಮ್ಮೊಬ್ಬರಿಂದಲೇ ಇದನ್ನು ಪೂರೈಸಲು ಸಾಧ್ಯವಿಲ್ಲ, ಇನ್ನಷ್ಟು ಜನರು ಇದೇ ವೃತ್ತಿ ಮಾಡಿದರೆ ಮಾವಿನ ಗಿಡಗಳನ್ನರಸಿ ಬಂದವರಿಗೆ ನಿರಾಶೆಯಾಗುವುದಿಲ್ಲ ಎಂದು ಕುಶಪ್ಪನವರು ಆಸಕ್ತರಿಗೆ ಕಲಮು ಕಟ್ಟುವ ಕಸುಬು ಹೇಳಿಕೊಡಲಾರಂಭಿಸಿದರು.

ಇಂದು ತೇರಗಾಂವಿನಲ್ಲಿ 225ಕ್ಕೂ ಹೆಚ್ಚು ಕುಟುಂಗಳು ಕಸಿ ಗಿಡ ತಯಾರಿಸುವ ಕಸುಬು ಮಾಡುತ್ತಿವೆ. 25–50 ರೂಪಾಯಿ ಬೆಲೆಗೆ ಸುಮಾರು ನಾಲ್ಕು ಲಕ್ಷ ಗಿಡಗಳ ಬಿಕರಿಯಾಗುತ್ತವೆ! ಕುಶಪ್ಪನವರ ಶಿಷ್ಯರೇ ಇಂದು ಕಸಿ ಉದ್ಯಮದಲ್ಲಿ ಪ್ರತಿಸ್ಪರ್ಧಿಗಳು. ಸ್ಪರ್ಧೆಯನ್ನೂ ಸಕಾರಾತ್ಮಕವಾಗಿ ಸ್ವೀಕರಿಸಿರುವುದೇ ಕುಶಪ್ಪನವರ ಹೆಚ್ಚುಗಾರಿಕೆ. ಕಳೆದ 35 ವರ್ಷಗಳಿಂದ ನಿರಂತರವಾಗಿ ನಡೆಸಿಕೊಂಡು ಬಂದ ಈ ಕಾಯಕಕ್ಕೆ ಪತ್ನಿ ಹಾಗೂ ಮೂವರು ಮಕ್ಕಳು ಕೈಜೋಡಿಸಿದ್ದಾರೆ. ಈ ವರ್ಷವೂ ಹನ್ನೊಂದು ಸಾವಿರ ಗಿಡಗಳನ್ನು ತಯಾರಿಸುತ್ತಿದ್ದಾರೆ. ಸಂಪರ್ಕಕ್ಕೆ: 9980645822.

(ಕೃಪೆ: ಪ್ರಜಾವಾಣಿ)

# ವಾಟ್ಸಾಪ್ ಬಳಸುವವರಿಗೆ ಉಪಯುಕ್ತ ಮಾಹಿತಿಗಳು




ಸ್ಮಾರ್ಟ್‌ಫೋನ್ ಬಳಕೆದಾರರಲ್ಲಿ ಬಹುತೇಕರು ವಾಟ್ಸಾಪ್ ಬಳಸುತ್ತಿರುತ್ತಾರೆ. ಚರ್ಚೆ, ಹರಟೆ, ಚಿತ್ರ, ವೀಡಿಯೋ, ಕಡತ ರವಾನೆಗಳಿಗೆಲ್ಲವೂ ವಾಟ್ಸಾಪ್ ಮೂಲಕವಾಗುತ್ತಿರುವುದೇ ಹೆಚ್ಚು. ವಾಟ್ಸಾಪ್‌ನ ಕೆಲವು ವಿಚಾರಗಳನ್ನು ತಿಳಿದರೆ ಬಳಕೆ ಇನ್ನಷ್ಟು ಸುಲಲಿತವಾಗಬಹುದು.

**ಕಂಪ್ಯೂಟರಿನಲ್ಲಿ ಬಳಸಿ:** ಕಂಪ್ಯೂಟರಿನಲ್ಲಿರುವ ಮಾಹಿತಿಯೊಂದನ್ನು ವಾಟ್ಸಾಪ್ ಮೂಲಕ ಕಳಿಸಬೇಕೆಂದಿರಲಿ, ಕಂಪ್ಯೂಟರ್ ಮೂಲಕ ಟೈಪಿಸುವುದು ನಿಮಗೆ ಸುಲಭವೆನಿಸಿರಲಿ; web.whatsapp.com ತೆರೆದು ಅಲ್ಲಿ ನೀಡಿರುವ ಸೂಚನೆ ಅನುಸರಿಸಿ. ಕಂಪ್ಯೂಟರ್ ಮೂಲಕ ನಿಮ್ಮ ವಾಟ್ಸಾಪ್ ಬಳಸಬಹುದು.

ಒಂದಷ್ಟು ಜನರಿಗೆ ನೀವು ವಾಟ್ಸಾಪ್ ಸಂದೇಶ ಕಳುಹಿಸುತ್ತಿರಬೇಕಾಗುತ್ತದೆ ಅಂದುಕೊಳ್ಳಿ. ಪದೇ ಪದೇ ಅವರ ಹೆಸರನ್ನು ಹುಡುಕಿ ಕಳುಹಿಸುವುದು ತ್ರಾಸದಾಯಕ. ಹಾಗೆಂದು ಗ್ರೂಪ್ ಮಾಡಿದರೆ ಅನಗತ್ಯ ಸಂದೇಶಗಳ ನಿಯಂತ್ರಣದ ಕೆಲಸ. ಇದಕ್ಕಾಗಿ broadcast message ಎಂಬ ಆಯ್ಕೆ ವಾಟ್ಸಾಪ್‌ನಲ್ಲಿದೆ. ನೀವು ಒಂದು ಬ್ರಾಡ್‌ಕಾಸ್ಟ್ ಗ್ರೂಪ್ ರಚಿಸಿ ಅದಕ್ಕೆ ಸಂದೇಶ ಕಳಿಸಿದಾಗ, ಅದರಲ್ಲಿರುವ ಎಲ್ಲರಿಗೂ ಪ್ರತ್ಯೇಕವಾಗಿ ನೇರವಾಗಿ ಕಳಿಸಿದ ಸಂದೇಶದಂತೆಯೇ ಅದು ರವಾನೆಯಾಗುತ್ತದೆ. ಅವರು ಪ್ರತಿಕ್ರಿಯಿಸಿದರೆ ನಿಮಗೆ ಮಾತ್ರ ಬರುತ್ತದೆ.

ಅತಿಯಾದ ಅನಗತ್ಯ ಸಂದೇಶಗಳಿಂದ ನಿಮ್ಮ ಇಂಟರ್ನೆಟ್ ಬಿಲ್ ದುಬಾರಿಯಾಗುತ್ತಿದ್ದರೆ, ಚಿತ್ರ ಮತ್ತು ವಿಡಿಯೋಗಳು ತಾನಾಗಿ ಡೌನ್‌ಲೋಡ್ ಆಗದಂತೆ ಮಾಡಲು ಅವಕಾಶವಿದೆ. ನಿಮಗೆ ಬೇಕಾದ ಸಂದೇಶವನ್ನು ಮತ್ತು ನೀವು ವೈಫೈ ಇಂಟರ್ನೆಟ್ ಹೊಂದಿದ್ದಾಗ ಮಾತ್ರ ಡೌನ್‌ಲೋಡ್ ಮಾಡಿ ಬಳಸಲು ಸಾಧ್ಯ. ಇದಕ್ಕಾಗಿ ಸೆಟ್ಟಿಂಗ್–>ಮೀಡಿಯಾ ಅಟೊ ಡೌನ್ಲೋಡ್ ಆಯ್ಕೆ ಬಳಸಿ.

ಪ್ರೈವೆಸೀ-> read receipts ಎಂಬ ಆಯ್ಕೆಯನ್ನು ತೆಗೆದು ಹಾಕಿದರೆ ನೀವು ಸಂದೇಶ ಓದಿರುವಿರೋ ಇಲ್ಲವೋ ಎಂಬುದು ಕಳುಹಿಸಿದವರಿಗೆ ತಿಳಿಯುವುದಿಲ್ಲ. ನಿಮ್ಮ ಖಾಸಗಿತನಕ್ಕೆ ಧಕ್ಕೆಯಾಗುವ ಸಂದರ್ಭದಲ್ಲಿ ಇದನ್ನು ಬಳಸಬಹುದು.

ನಿಮ್ಮ ಸಂಖ್ಯೆಯನ್ನು ಹೊಂದಿರುವ ಯಾರು ಬೇಕಾದರೂ ನಿಮ್ಮ ಸ್ಕ್ರೀನ್ ಹೆಸರು ಮತ್ತು ಪ್ರೊಫೈಲ್ ಚಿತ್ರವನ್ನು ಕಾಣಬಹುದಾಗಿದೆ. ನಿಮ್ಮ ಸಂಪರ್ಕ ಪಟ್ಟಿಯಲ್ಲಿರುವವರಿಗೆ ಮಾತ್ರವೇ ಪ್ರೊಫೈಲ್ ಚಿತ್ರವನ್ನು ಕಾಣಬಹುದಾದ ಸರಳ ವಿಧಾನವಿದೆ. ಪ್ರೈವಸಿ ಮೆನುವಿನಲ್ಲಿ ನಿಮ್ಮ ‘ಪ್ರೊಫೈಲ್ ಪಿಕ್ಚರ್ ಶೇರಿಂಗ್” ಅನ್ನು “ಕಾಂಟಾಕ್ಟ್ಸ್ ಆನ್ಲೀ” ಗೆ ಬದಲಾಯಿಸಬಹುದಾಗಿದೆ.

ಒಂದು ವಾಟ್ಸಾಪ್ ಸಂದೇಶವನ್ನು ನೆನಪಿಡಬೇಕೇ? ಹಾಗಾದರೆ ಸಂದೇಶವನ್ನು ಸೆಲೆಕ್ಟ್ ಮಾಡಿ ಸ್ಟಾರ್ ಐಕಾನ್ ಕ್ಲಿಕ್ ಮಾಡಿ. ಆ ಸಂದೇಶ ನಿಮ್ಮ ಮೆನುವಿನ ಸ್ಟಾರೆಡ್ ಮೆಸೇಜಸ್ ಪುಟದಲ್ಲಿ ಲಭ್ಯವಾಗುತ್ತದೆ.

ನೀವಿರುವ ಜಾಗವನ್ನು ನಿಮ್ಮ ಸ್ನೇಹಿತರ ಜೊತೆ ಹಂಚಿಕೊಳ್ಳಬೇಕೆ? ವಾಟ್ಸಾಪ್ ಸಂದೇಶ ಟೈಪಿಸುವಾಗ, ಅಟ್ಯಾಚ್ಮೆಂಟ್ ಇಕಾನ್ ಕ್ಲಿಕ್ ಮಾಡಿ, ಮ್ಯಾಪ್ ಆಯ್ಕೆ ಮಾಡಿ. ಇತರರಿಗೆ ನೀವಿರುವಲ್ಲಿಗೆ ಬರುವ ದಾರಿ ತಿಳಿಸಲು ಇದು ಉಪಯುಕ್ತ.

ಸಂಪಾದಕೀಯ ಸಹಕಾರ ಪ್ರವೀಣ್ ಪಟವರ್ಧನ್, ಸತ್ಯನಾರಾಯಣ ಶಾನುಬೋಗ್, ಶ್ರೀಹರ್ಷ ಪೆರ್ಲ, ಶೈಲೇಶ್ ಕುಲಕರ್ಣಿ, ಪ್ರತಾಪ ಕೊಡಂಚ, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

## ದೇಶದ ಪ್ರಧಾನಿಗಳಲ್ಲಿ ಹುರುಪು ತುಂಬುವ ಸಾಮಾನ್ಯರ ಸಾಮಾಜಿಕ ಕಾಳಜಿ !!

ಚಂದ್ರಕಾಂತ್ ದಾಮೋದರ್ ಕುಲಕರ್ಣಿ ಅವರು ಮಹಾರಾಷ್ಟ್ರದ ಪುಣೆಯ ನಿವಾಸಿ. ಸಾಧಾರಣ ಮಧ್ಯಮ ವರ್ಗದ ಕುಟುಂಬದವರಾದ ಇವರು ಇತ್ತೀಚಿಗೆ ಸರ್ಕಾರಿ ವೃತ್ತಿಯಿಂದ ನಿವೃತ್ತರಾಗಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಸಮಾಜಕ್ಕೆ ಏನಾದರೂ ಸೇವೆ ಸಲ್ಲಿಸಬೇಕು ಎಂಬ ಹಂಬಲದಿಂದ ನೇರ ಪ್ರಧಾನಿ ಮೋದಿಯವರಿಗೆ ಪತ್ರದ ಮೂಲಕ ಬರೆದು, 'ಸ್ವಚ್ಛ ಭಾರತ' ಯೋಜನೆಗೆ ತನಗೆ ದೊರೆಯುವ ರೂ. 16,000 ನಿವೃತ್ತಿ ವೇತನದಲ್ಲಿ ಪ್ರತಿ ತಿಂಗಳು 5,000 ರೂಪಾಯಿಗಳನ್ನು ದೇಣಿಗೆಯಾಗಿ ಸ್ವೀಕರಿಸುವಂತೆ ತಿಳಿಸಿದರು. ಮಾತ್ರವಲ್ಲದೇ 52 ಚೆಕ್‌ಗಳನ್ನೂ ಮುಂಗಡವಾಗಿ ಸಹಿ ಮಾಡಿ ಸಲ್ಲಿಸಿದ್ದಾರೆ. ನಮ್ಮ ದೇಶದ ಸಾಮಾನ್ಯ ನಾಗರಿಕರ ಇಂತಹ ಸಾಮಾಜಿಕ ಕಳಕಳಿಯೇ ತಾನು ಇನ್ನಷ್ಟು ಹುರುಪಿನಿಂದ ದುಡಿಯುವಂತೆ ಮಾಡುವ ಚೈತನ್ಯ ತುಂಬುತ್ತಿದೆ ಎಂದು ಸ್ವತಃ ಪ್ರಧಾನಿ ಇತ್ತೀಚಿನ ತಮ್ಮ ಸಂದರ್ಶನವೊಂದರಲ್ಲಿ ಈ ಘಟನೆ ಉಲ್ಲೇಖಿಸಿದ್ದರು.

**ಮಧ್ಯ ಪ್ರದೇಶದ ರಾಯಗಢ ಜಿಲ್ಲೆಯ ಅಮ್ಲಿಡಿಹ್ ಹಳ್ಳಿಯ ನಿವಾಸಿ ವರುಣ್ ಕುಮಾರ್ ಪ್ರಧಾನ್ (56 ವರ್ಷ) ತಮ್ಮ ವಿಶಿಷ್ಟ ಕೆಲಸದಿಂದಾಗಿ ಅನೇಕ ಅಂಧ ಮತ್ತು ದಿವ್ಯಾಂಗರ ಬಾಳಿಗೆ ದಾರಿದೀಪವಾಗಿದ್ದಾರೆ. ಪ್ರಧಾನ್ ಅವರು 'ನೇತ್ರಹೀನ್ ಬಾಲ್ ವಿದ್ಯಾಮಂದಿರ' ಎಂಬ ವಸತಿ ಶಾಲೆಯನ್ನು ಬಡ ಅಂಧಮಕ್ಕಳಿಗಾಗಿಯೇ ಸಂಪೂರ್ಣ ನಿಃಶುಲ್ಕವಾಗಿ ನಡೆಸುತ್ತಿದ್ದಾರೆ. ಸದ್ಯ ಈ ಶಾಲೆಯಲ್ಲಿ 30 ವಿದ್ಯಾರ್ಥಿಗಳಿದ್ದು, ಈ ಶೈಕ್ಷಣಿಕ ವರ್ಷದಿಂದ 60ಕ್ಕೆ ಏರಿಸುವ ವಿಶ್ವಾಸದಲ್ಲಿದ್ದಾರೆ. ಈ ವಸತಿ ಶಾಲೆಯಲ್ಲಿ ಶೈಕ್ಷಣಿಕ ಪಾಠಗಳಲ್ಲದೇ ವೃತ್ತಿಪರ ತರಬೇತಿಯೂ ಪಠ್ಯದ ಭಾಗವಾಗಿದೆ. ಸರ್ಕಾರದಿಂದ ಯಾವುದೇ ಧನಸಹಾಯ ಪಡೆಯದೇ ಸಮಾನ ಮನಸ್ಕರ ದೇಣಿಗೆಯಿಂದಲೇ ಈ ಪ್ರೇರಣಾದಾಯಿ ಕೆಲಸ ಮಾಡುತ್ತಿದ್ದಾರೆ.**

ಸ್ವಚ್ಛತೆಗೆ, ಆರೋಗ್ಯಕ್ಕೆ ಪ್ರಾಧಾನ್ಯತೆ ಕೊಟ್ಟು ಮನೆಯಲ್ಲಿ ಶೌಚಾಲಯ ನಿರ್ಮಿಸಿಕೊಳ್ಳಲು ಬಡ ಮಹಿಳೆಯೊಬ್ಬರು ತನ್ನ ಮಾಂಗಲ್ಯವನ್ನೇ ಅಡವಿಟ್ಟ ಘಟನೆ ಬಿಹಾರದ ರೋಹ್ತಕ್ ಜಿಲ್ಲೆಯ ಗ್ರಾಮವೊಂದರಲ್ಲಿ ನಡೆದಿದೆ. ಫಲ್ ಕುಮಾರಿ ತನ್ನ ಮಾಂಗಲ್ಯವನ್ನು ಅಡಮಾನಕ್ಕಿಟ್ಟ ಮಹಿಳೆ. ಪ್ರಾಥಮಿಕ ಶಾಲೆಯೊಂದರಲ್ಲಿ ಅಡುಗೆ ಕೆಲಸ ಮಾಡುತ್ತಿರುವ ಫಲ್ ಕುಮಾರಿಯ ಪತಿ ಕೃಷಿ ಕಾರ್ಮಿಕರಾಗಿದ್ದಾರೆ. ಶೌಚಾಲಯ ನಿರ್ಮಾಣಕ್ಕೆ ಬೇಕಾಗುವಷ್ಟು ಹಣ ಹೊಂದಿಸಲಾಗದೇ ಕೊನೆಗೆ ಫಲ್ ಕುಮಾರಿ ತನ್ನ ತಾಳಿಯನ್ನೇ ಅಡವಿಟ್ಟಿದ್ದಾರೆ. ಮಹಿಳೆಯ ಧೈರ್ಯ, ದೃಢ ನಿರ್ಧಾರಕ್ಕೆ ಮೆಚ್ಚಿಗೆ ವ್ಯಕ್ತಪಡಿಸಿರುವ ಸ್ಥಳೀಯ ಸರ್ಕಾರ ಆಕೆಯನ್ನು 'ನೈರ್ಮಲ್ಯ ಯೋಜನೆ'ಯ ರಾಯಭಾರಿಯನ್ನಾಗಿ ಮಾಡಿದೆ. ರೋಹ್ತಾಸ್ ಜಿಲ್ಲೆಯ ಜಿಲ್ಲಾಧಿಕಾರಿ, ನ್ಯಾಯಾಧೀಶರು, ಇತರ ಅಧಿಕಾರಿಗಳು ಶೌಚಾಲಯ ಉದ್ಘಾಟನೆ ಮಾಡಲಿದ್ದಾರೆ.

**ಯುನೆಸ್ಕೊ ಗುರುತಿಸುವ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಭಾರತದ 3 ತಾಣಗಳು ಸ್ಥಾನ ಪಡೆದಿವೆ. ಜಗತ್ತಿನ ಮೂರನೇ ಅತಿ ಎತ್ತರದ ಶಿಖರ ಕಾಂಚನಜುಂಗದ ನೆಲೆಯಾಗಿರುವ ಸಿಕ್ಕಿಂನ ರಾಷ್ಟ್ರೀಯ ಉದ್ಯಾನ, ಚಂಡೀಗಢದ ಕ್ಯಾಪಿಟಲ್ ಕಾಂಪ್ಲೆಕ್ಸ್ (ಭಾರತ ಸೇರಿದಂತೆ 7 ದೇಶಗಳಲ್ಲಿ ಖ್ಯಾತ ವಾಸ್ತುಶಿಲ್ಪಿ ಲೀ ಕಾರ್ಬ್ಯೂಸಿಯರ್ ನಿರ್ಮಿಸಿದ್ದ ಕಟ್ಟಡಗಳು) ಮತ್ತು ಬಿಹಾರದ ಇತಿಹಾಸ ಪ್ರಸಿದ್ಧ ನಳಂದ ವಿಶ್ವವಿದ್ಯಾಲಯದ ಅವಶೇಷಗಳನ್ನು ಪಾರಂಪರಿಕ ತಾಣಗಳನ್ನಾಗಿ ಯುನೆಸ್ಕೊ ಗುರುತಿಸಿದೆ. ಯುನೆಸ್ಕೋದ ಒಂದೇ ಸಭೆಯಲ್ಲಿ ಯಾವುದೇ ದೇಶದ ಮೂರು ತಾಣಗಳಿಗೆ ಪಾರಂಪರಿಕ ತಾಣಗಳ ಹಿರಿಮೆ ಸಿಕ್ಕಿದ್ದು ಇದೇ ಮೊದಲು.**

## ಶ್ರದ್ಧೆಯೇ ಯಶಸ್ಸಿನ ಕೀಲಿ ಕೈ



**ಇದು ಕನಸುಗಾರ ಯುವಕನೊಬ್ಬನ ಕಥೆ. ತಮಿಳುನಾಡು ಮೂಲದ ಕಾರ್ತಿಕ್ ಎಂಜಿನಿಯರಿಂಗ್ ಪದವಿ ಪಡೆದು ಸ್ವಂತವಾಗಿ ಸಾಫ್ಟ್‌ವೇರ್ ಕಂಪೆನಿ ಸ್ಥಾಪಿಸಬೇಕು ಎಂಬ ಗುರಿಯೊಂದಿಗೆ ಸಿಕ್ಕ ಅವಕಾಶಗಳನ್ನು ಕೈ ಚೆಲ್ಲಿ, ಕಾರನ್ನು ಕಚೇರಿಯನ್ನಾಗಿ ಮಾಡಿಕೊಂಡು, ನೂರಾರು ಸಂಕಷ್ಟಗಳನ್ನು ಮೆಟ್ಟಿನಿಂತು 'ಸ್ಕ್ರಿಪ್ಟ್' ಎಂಬ ಕಂಪೆನಿ ಕಟ್ಟಿದವರು. ಅವರು ಅನುಭವವನ್ನು ಹಂಚಿಕೊಂಡಿರುವುದು ಹೀಗೆ...**

# ಸಾಲುದ್ದದ ಸುದ್ದಿಗಳು

**ಹೈಸ್ಕೂಲ್ ಓದುವಾಗಲೇ ಕಂಪ್ಯೂಟರ್ ಮೇಲೆ ಅತೀವ ಆಸಕ್ತಿ. ಆದರೆ ಕಂಪ್ಯೂಟರ್ ಇರಲಿಲ್ಲ. ಅಪ್ಪ ವಿಮಾ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರು 2ಕೋಟಿ ರೂ. ಮೊತ್ತದ ವಿಮೆಗಳನ್ನು ಮಾಡಿಸಿದ್ದಕ್ಕಾಗಿ ಕಂಪೆನಿಯವರು ಕಂಪ್ಯೂಟರನ್ನು ಉಡುಗೊರೆಯಾಗಿ ನೀಡಿದ್ದರು! ತಂದೆ, 'ಕಂಪ್ಯೂಟರ್ ನನಗೆ ಉಪಯೋಗಕ್ಕೆ ಬರುವುದಿಲ್ಲ, ಬದಲಿಗೆ ಹಣ ಕೊಡಿ' ಎಂದು ಕಂಪೆನಿಗೆ ಪತ್ರ ಬರೆದರು. ಇದನ್ನು ಕಂಪೆನಿ ನಿರಾಕರಿಸಿತು. ಕಂಪ್ಯೂಟರ್ ಅನಿವಾರ್ಯವಾಗಿ ಮನೆಯಲ್ಲೇ ಉಳಿಯಿತು! ಇದರಲ್ಲೇ ಕಂಪ್ಯೂಟರ್ ಕಲಿತು, ಸ್ವಇಚ್ಛೆಯಂತೆ ಎಂಜಿನಿಯರಿಂಗ್ ಸೇರಿದೆ. ಪದವಿ ಬಳಿಕ ಮನೆಯವರ ಒತ್ತಡಕ್ಕೆ ಮಣಿದು, ಆ್ಯಪಲ್, ಮೈಕ್ರೊಸಾಫ್ಟ್, ಗೂಗಲ್ ಕಂಪೆನಿಯಲ್ಲಿ ಕೆಲಸ ಮಾಡಿದೆ. ಕಂಪೆನಿ ಕಟ್ಟುವ ಸಲುವಾಗಿ ಕೆಲಸಕ್ಕೆ ರಾಜೀನಾಮೆ ಕೊಟ್ಟೆ. 120 ರೂ. ಬ್ಯಾಂಕ್ ಬ್ಯಾಲೆನ್ಸ್, ಒಂದು ಲ್ಯಾಪ್‌ಟಾಪ್ ಮತ್ತು ಕಾರನ್ನು ಕಚೇರಿಯಾಗಿಸಿಕೊಂಡು 'ಸ್ಕ್ರಿಪ್ಟ್' ಕಂಪೆನಿ ಕಟ್ಟಿದ್ದು ನಿಜಕ್ಕೂ ಹೋರಾಟ. ಇಂದು ನಮ್ಮ ಕಂಪೆನಿ ಕೋಟ್ಯಾಂತರ ರೂ. ವಹಿವಾಟು ನಡೆಸುತ್ತಿದೆ. www.skcript.com**

ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ ಸ್ವಚ್ಛ ಭಾರತ ಅಭಿಯಾನವನ್ನು ಯಶಸ್ವಿಯಾಗಿಸಲು ಪುದುಚೇರಿ ಸರ್ಕಾರ ವಿನೂತನ ಪ್ರಯತ್ನಕ್ಕೆ ಕೈಹಾಕಿದೆ. ಪುದುಚೇರಿಯಲ್ಲಿ ಗಲೀಜು ಮಾಡುವವರ ಮೇಲೆ ನಿಗಾ ವಹಿಸಲು 'ಸ್ವಚ್ಛ ಬಾಲ ಸೇನೆ' ಸ್ಥಾಪಿಸಲಾಗುವುದು ಎಂದು ಪುದುಚೇರಿಯ ಲೆ. ಗವರ್ನರ್ ಕಿರಣ್ ಬೇಡಿ ತಿಳಿಸಿದ್ದಾರೆ.




ಇದರಲ್ಲಿರುವ ಮಕ್ಕಳಿಗೆ ಹಳದಿ ಬಣ್ಣದ ವಿಷಲ್ ನೀಡಲಾಗುವುದು. ಈ ಮಕ್ಕಳು ರಸ್ತೆ ಬದಿಯಲ್ಲಿ ಮತ್ತು ಚರಂಡಿಗಳಿಗೆ ಕಸ ಎಸೆಯುವವರನ್ನು, ಬಯಲಲ್ಲಿ ಬಹಿರ್ದೆಸೆಗೆ ಹೋಗುವವರನ್ನು ಕಂಡರೆ ಸೀಟಿ ಹೊಡೆದು ಎಚ್ಚರಿಸಲಿದ್ದಾರೆ. ಇದರಿಂದ ಸಾಮಾಜಿಕ ಜಾಗೃತಿಯ ಜೊತೆಗೆ ಮಕ್ಕಳಲ್ಲಿಯೂ ಶುಚಿತ್ವದ ಅರಿವು ಹೆಚ್ಚಾಗಲಿದೆ. ಮುಂದಿನ ದಿನಗಳಲ್ಲಿ ಪುದುಚೇರಿಯನ್ನು ಸ್ವಚ್ಛ ರಾಜ್ಯವಾಗಿ ರೂಪಿಸಲು ಇದು ನೆರವಾಗಲಿದೆ ಎಂದು ಕಿರಣ್ ಬೇಡಿ ತಿಳಿಸಿದ್ದಾರೆ.




ಗೋವುಗಳ ಸಂಖ್ಯೆ ತಿಳಿಯಲು ಮತ್ತು ಗೋ ಸಂರಕ್ಷಣೆ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಗೋ ರಕ್ಷಾ ಸಮಿತಿಯು ಪಶ್ಚಿಮ ಬಂಗಾಳದಲ್ಲಿರುವ ಗೋವುಗಳ ಗಣತಿಯನ್ನು ಆರಂಭಿಸಲು ನಿರ್ಧರಿಸಿದೆ. ಆಗಸ್ಟ್ 1ರಿಂದ ಗೋವುಗಳ ಗಣತಿ ಪ್ರಾರಂಭವಾಗಲಿದ್ದು, ಗೋರಕ್ಷಾ ಸಮಿತಿಯ ನೂರಾರು ಸದಸ್ಯರು ಪ. ಬಂಗಾಳದ ಪ್ರತಿಯೊಂದು ಹಳ್ಳಿಗೂ ತೆರಳಿ ಗೋವುಗಳ ಮಾಹಿತಿ ಕಲೆ ಹಾಕಲಿದ್ದಾರೆ. ಇದು ಮೊದಲನೇ ಹಂತದ ಸಮೀಕ್ಷೆಯಾಗಿದ್ದು, ಸೆಪ್ಟೆಂಬರ್‌ನಲ್ಲಿ ಬಕ್ರಿದ್ ಹಬ್ಬದ ನಂತರ ಮತ್ತೊಮ್ಮೆ ಸಮೀಕ್ಷೆ ನಡೆಸಲಾಗುವುದು. ಆ ನಂತರ ಕಡಿಮೆಯಾಗಿರುವ ಗೋವುಗಳ ಸಂಖ್ಯೆ ಪತ್ತೆ ಹಚ್ಚಲಾಗುವುದು. ಬಕ್ರಿದ್ ಸಂದರ್ಭದಲ್ಲಿ ಸಾವಿರಾರು ಗೋವುಗಳನ್ನು ಬಾಂಗ್ಲಾದೇಶಕ್ಕೆ ಕಳ್ಳ ಸಾಗಣೆ ಮತ್ತು ಹತ್ಯೆ ಮಾಡಲಾಗುತ್ತಿದೆ. ರಾಜ್ಯದಲ್ಲಿ ಗೋ ಹತ್ಯೆಗೆ ನಿಷೇಧವಿದ್ದರೂ ಸಹ ಗೋವುಗಳ ಕಳ್ಳಸಾಗಣೆ ನಿಂತಿಲ್ಲ. ನಿಯಮಾವಳಿಗಳನ್ನು ಯಾರೂ ಪಾಲಿಸುತ್ತಿಲ್ಲ ಎಂದು ಗೋ ರಕ್ಷಾ ಸಮಿತಿಯ ಅಧ್ಯಕ್ಷ ಸುಬ್ರತ ಗುಪ್ತಾ ತಿಳಿಸಿದ್ದಾರೆ.

# ಗ್ರಾಮಾಭ್ಯುದಯಕ್ಕೆ 'ಸಮುದಾಯ'ದ ಹೆಜ್ಜೆ

ಚಿಕ್ಕಬಳ್ಳಾಪುರ ಮತ್ತು ಕೋಲಾರ ಅವಳಿ ಜಿಲ್ಲೆಗಳ ಬಾಗೇಪಲ್ಲಿ, ಶಿಡ್ಲಘಟ್ಟ, ಚಿಂತಾಮಣಿ, ಶ್ರೀನಿವಾಸಪುರ ಹಾಗೂ ಕೋಲಾರದ ಸುಮಾರು 350 ಗ್ರಾಮಗಳಲ್ಲಿ ಜನರು ಏನಾದರೂ ಕೆಲಸವಾಗಬೇಕೆಂದರೆ ಮೊದಲು ನೆನಪು ಮಾಡಿಕೊಳ್ಳುವುದು 75 ಜನರಿರುವ 'ಸಮುದಾಯ ಸಂಪನ್ಮೂಲ ವ್ಯಕ್ತಿ'ಗಳ ತಂಡವನ್ನು. ಈ ತಂಡದ ಮೂಲಕ ಇಂದು ಈ ಎಲ್ಲಾ ಗ್ರಾಮಗಳೂ ಅಭಿವೃದ್ಧಿ ಪಥದತ್ತ ಸಾಗುತ್ತಿವೆ.

ಬಾಗೇಪಲ್ಲಿ ತಾಲ್ಲೂಕಿನಲ್ಲಿ ಸುಮಾರು 44,343 ಹೆಕ್ಟೇರ್‌ನಷ್ಟು ಭೂ ಪ್ರದೇಶವಿದೆ. ಅದಲ್ಲದೇ ಸುಮಾರು 405 ಕೆರೆಗಳು ಇಲ್ಲಿಯವರ ಜೀವನಾಧಾರ. ಆದರೆ ಬರಡಾಗುತ್ತಿರುವ ಅರಣ್ಯ, ಬತ್ತಿರುವ ಹಾಗೂ ಹೂಳು ತುಂಬಿದ ಕೆರೆಗಳು, ಗೋಮಾಳದಲ್ಲಿ ಆಗಿಂದಾಗೆ ಬೀಳುವ ಬೆಂಕಿ – ಹೀಗೆ ಹತ್ತು ಹಲವು ಸಮಸ್ಯೆಗಳಿಂದ ಭೂಮಿಗಳು ನಿಷ್ಪ್ರಯೋಜಕವಾಗಿದ್ದವು. ಇವುಗಳನ್ನು ಅಭಿವೃದ್ಧಿಪಡಿಸಲು ಯಾರೂ ಆಸ್ಥೆ ತೋರದೇ ಇದ್ದಂಥ ಪರಿಸ್ಥಿತಿಯಲ್ಲಿ ಪ್ರತಿ ಗ್ರಾಮಗಳಲ್ಲಿ ಗ್ರಾಮಾಭಿವೃದ್ಧಿ ಸಮಿತಿಗಳನ್ನು ಸ್ಥಾಪಿಸಿ ಅವುಗಳ ಮೂಲಕ ಜಮೀನುಗಳ ಅಭಿವೃದ್ಧಿಗೆ ದಾಪುಗಾಲು ಇಟ್ಟಿರುವ ಹೆಮ್ಮೆ ಈ ತಂಡದ್ದು. ಇದೇ ರೀತಿ ಈವರೆಗೆ ಸುಮಾರು 75 ಗ್ರಾಮಾಭಿವೃದ್ಧಿ ಸಮಿತಿಗಳನ್ನು ಸ್ಥಾಪಿಸಿದ್ದಾರೆ.



ಗ್ರಾಮದ ಹಿರಿಯರು, ಸ್ತ್ರೀಶಕ್ತಿ ಸಂಘದ ಸದಸ್ಯರು, ಗ್ರಾಮ ಪಂಚಾಯತ್ ಸದಸ್ಯರು – ಹೀಗೆ ಎಲ್ಲರನ್ನು ಸೇರಿಸಿ, ಗ್ರಾಮಗಳಲ್ಲಿರುವ ಸಾಮೂಹಿಕ ಭೂಪ್ರದೇಶಗಳ ಬಗ್ಗೆ ಅರಿವು ಮೂಡಿಸುತ್ತಿದ್ದಾರೆ. ಕಲ್ಯಾಣಿ, ಕೆರೆ–ಕುಂಟೆಗಳ ಅಭಿವೃದ್ಧಿ ಯೋಜನೆಯನ್ನು ಗ್ರಾಮಸ್ಥರ ಸಹಭಾಗಿತ್ವದಲ್ಲೆ ತಯಾರಿಸಿ ಅಭಿವೃದ್ಧಿಪಡಿಸುತ್ತಿದ್ದಾರೆ. ಗ್ರಾಮ ಪಂಚಾಯತ್‌ನಲ್ಲಿ ಅನುಮೋದನೆಗೊಂಡ ಕಾಮಗಾರಿಗಳ ಪಟ್ಟಿಯನ್ನು ಗ್ರಾಮಗಳಿಗೆ ತೆಗೆದುಕೊಂಡು ಹೋಗಿ, ಸಭೆ ಏರ್ಪಡಿಸಿ ಕಾಮಗಾರಿಗಳ ಬಗ್ಗೆ ವಿವರಿಸುತ್ತಾರೆ. ಕಾಮಗಾರಿ ಕೈಗೊಳ್ಳುವ ಸಂಬಂಧ ವಿವಿಧ ಅಧಿಕಾರಿಗಳನ್ನು ಕರೆತರುವುದು, ಅಂದಾಜು ಪಟ್ಟಿ ತಯಾರಿಸುವುದು, ಎಲ್ಲ ಕೆಲಸಗಳನ್ನು ಮಾಡಿ ಆ ಕಾಮಗಾರಿ ಹಣವನ್ನು ಗ್ರಾಮಸ್ಥರಿಗೆ ತಲುಪುವಂತೆ ಮಾಡಲು ಶ್ರಮಿಸುತ್ತಿದ್ದಾರೆ. ಹೀಗೆ ಈವರೆಗೆ ಸುಮಾರು 2 ಕೋಟಿಯಷ್ಟು ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದು ಸಾಮೂಹಿಕ ಭೂಪ್ರದೇಶ ಹಾಗೂ ಜಲಮೂಲ ಸಂರಕ್ಷಣೆಗೆ ಸಹಾಯವಾಗುವಂತೆ ಗೋಕುಂಟೆ, ಸಸಿನಾಟಿ ಕಾಮಗಾರಿಗಳನ್ನು ಕೈಗೊಂಡಿದ್ದಾರೆ.

ಹಲವಾರು ಕಾರಣಗಳಿಂದ ಕೃಷಿ ತೊರೆದು ಪಟ್ಟಣಗಳತ್ತ ಗುಳೆ ಹೋಗಲು ಮನಸ್ಸು ಮಾಡುವ ರೈತರಿಗೆ ಸುಸ್ಥಿರ ಬೇಸಾಯ ಪದ್ಧತಿ, ಜೈವಿಕ ಗೊಬ್ಬರಗಳ ಬಳಕೆ, ಸುತ್ತು ಬೆಳೆ, ಅಂತರಬೆಳೆ ಮತ್ತು ಮಿಶ್ರಬೆಳೆಗಳ ಕುರಿತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ ಮನ ಪರಿವರ್ತಿಸುತ್ತಿದ್ದಾರೆ. ಈ ವರ್ಷ ಸುಮಾರು 2,200 ರೈತರಿಗೆ ತರಬೇತಿ ನೀಡಿ ಬಾಗೇಪಲ್ಲಿಯ ಸುಮಾರು 100 ಗ್ರಾಮಗಳಲ್ಲಿ ಬದಲಾವಣೆ ತಂದಿದ್ದಾರೆ.

ಬಾಗೇಪಲ್ಲಿಯ ಜನರು ಕಳೆದ ನಾಲ್ಕೈದು ವರ್ಷಗಳಿಂದ ಬರದಿಂದಾಗಿ ಜಾನುವಾರುಗಳಿಗೆ ಮೇವಿಲ್ಲದೇ ಪರದಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಸಮುದಾಯ ಸಂಪನ್ಮೂಲ ವ್ಯಕ್ತಿಗಳು ರೈತರಿಗೆ ಹಸಿರು ಮೇವಿನ ಬೀಜಗಳನ್ನು ಉಚಿತವಾಗಿ ನೀಡುತ್ತಿದ್ದಾರೆ. ಒಮ್ಮೆ ಈ ಹುಲ್ಲನ್ನು ಬೆಳೆದರೆ ಮತ್ತೆ ಐದಾರು ವರ್ಷಗಳವರೆಗೆ ಮತ್ತೆ ಹೊಸದಾಗಿ ಮೇವು ಬೆಳೆಯುವ ಅಗತ್ಯವಿರುವುದಿಲ್ಲ. ಹಸುವಿನ ಹಾಲಿನಲ್ಲಿಯೂ ಏರಿಕೆ ಕಂಡುಬಂದಿದೆ. ಈಗಾಗಲೇ ಸುಮಾರು 250 ರೈತರು ಈ ರೀತಿಯ ಹುಲ್ಲನ್ನು ಬೆಳೆಸಿ ಸಾವಿರಾರು ರೂಪಾಯಿಗಳನ್ನು ಉಳಿಸಿದ್ದಾರೆ.

ಈ ಎಲ್ಲ ಕೆಲಸ ಕಾರ್ಯಗಳಿಗೆ ಇವರಿಗೆ ಬೆನ್ನೆಲುಬಾಗಿ ನಿಂತಿರುವುದು ಚಿಂತಾಮಣಿಯ ಫೌಂಡೇಶನ್ ಫಾರ್ ಎಕಲಾಜಿಕಲ್ ಸೆಕ್ಯೂರಿಟಿ ಸಂಸ್ಥೆ. ಈ ಸಂಸ್ಥೆಯು ನೆಲಜಲ ಸಂರಕ್ಷಣೆಯ ಕಾರ್ಯದಲ್ಲಿ ಕಳೆದ 20 ವರ್ಷಗಳಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ.

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
1-8-2016



# ಕಾಲ್ನಡಿಗೆಯಲ್ಲಿ 20,000 ಕಿ.ಮೀ. ಕ್ರಮಿಸಿದ ಭಾರತ ಪರಿಕ್ರಮ ಯಾತ್ರೆ



ನಾಲ್ಕು ವರ್ಷಗಳ ಹಿಂದೆ ದಕ್ಷಿಣದ ತುತ್ತತುದಿ ಕನ್ಯಾಕುಮಾರಿಯಿಂದ ಹೊರಟಿದ್ದ ಗ್ರಾಮ ಜಾಗೃತಿಯ 'ಭಾರತ ಪರಿಕ್ರಮ ಯಾತ್ರೆ'ಯು ಇದೀಗ 1486 ದಿನಗಳನ್ನು ಪೂರೈಸಿದ್ದು, 20,000 ಕಿ.ಮೀ ದೂರವನ್ನು ಕ್ರಮಿಸಿದೆ. ಆರೆಸ್ಸೆಸ್‌ನ ಅಖಿಲ ಭಾರತೀಯ ಸೇವಾ ಪ್ರಮುಖರಾಗಿದ್ದ ಸೀತಾರಾಮ ಕೆದಿಲಾಯ ಅವರ ನೇತೃತ್ವದ ಈ ಯಾತ್ರೆಯು ಜುಲೈ 13ರಂದು ಒಡಿಸ್ಸಾದ ಕೋರಾಪುತ್ ಜಿಲ್ಲೆಯ ಚಾತುವಾ ಗ್ರಾಮದಿಂದ ಆಂಧ್ರಪ್ರದೇಶದ ವಿಶಾಖಪಟ್ಟಣಮ್ ಜಿಲ್ಲೆಯ ಅರಕು ಗ್ರಾಮವನ್ನು ಪ್ರವೇಶಿಸಿದರು. ಇದು (ಆಂಧ್ರಪ್ರದೇಶ) 68ರ ಹರೆಯದ ಕೆದಿಲಾಯರ ನೇತೃತ್ವದ ಭಾರತ ಪರಿಕ್ರಮ ಯಾತ್ರೆ ಪ್ರವೇಶಿಸಿದ 22ನೇ ರಾಜ್ಯ.

ನೆಲ, ಜಲ, ಗ್ರಾಮೀಣ ಬದುಕಿನ ಮೌಲ್ಯದ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ 2012ರ ಆಗಸ್ಟ್ 9ರಂದು ಕನ್ಯಾಕುಮಾರಿಯಲ್ಲಿ ಕೆದಿಲಾಯರ ನೇತೃತ್ವದ ಭಾರತ ಪರಿಕ್ರಮ ಯಾತ್ರೆಗೆ ಚಾಲನೆ ನೀಡಲಾಯಿತು. ಕೆದಿಲಾಯರು ಪ್ರತಿದಿನ 10–15 ಕಿ.ಮೀ. ದೂರವನ್ನು ಕಾಲ್ನಡಿಗೆಯಲ್ಲಿ ಕ್ರಮಿಸಿ, ಪಾದಯಾತ್ರೆಯಲ್ಲಿ ಭೇಟಿ ನೀಡುವ ಗ್ರಾಮಗಳ ಜನರೊಂದಿಗೆ ಗ್ರಾಮೀಣ ಜನಜೀವನ, ಕೃಷಿ, ಗೋಸಂರಕ್ಷಣೆ, ನಾಟಿ ವೈದ್ಯ ಪದ್ಧತಿ, ಪರಿಸರ ಸಂರಕ್ಷಣೆ ಮುಂತಾದ ವಿಷಯಗಳ ಕುರಿತು ಚರ್ಚೆ ನಡೆಸುತ್ತಿದ್ದಾರೆ. ಈ ಮೂಲಕ ಗ್ರಾಮೀಣ ಜೀವನದ ಮಹತ್ವ, ಅದರ ವಿಶೇಷತೆ ಮತ್ತು ಅದರ ಪ್ರಸ್ತುತತೆಯ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತಿದ್ದಾರೆ. ಈಗಾಗಲೇ ಸುಮಾರು 1850ಕ್ಕೂ ಅಧಿಕ ಗ್ರಾಮಗಳಿಗೆ ಕೆದಿಲಾಯರು ಭೇಟಿ ನೀಡಿದ್ದಾರೆ.

ಈಗಾಗಲೇ ಕೇರಳ, ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ಜಮ್ಮು–ಕಾಶ್ಮೀರ, ಈಶಾನ್ಯ ಭಾರತ ಸೇರಿದಂತೆ 22 ರಾಜ್ಯಗಳಲ್ಲಿ ಸಂಚರಿಸಿರುವ ಈ ಯಾತ್ರೆಯು ಇದೀಗ ಪುನಃ ದಕ್ಷಿಣದ ಆಂಧ್ರಪ್ರದೇಶ ತಲಪಿದೆ. ಈ ಯಾತ್ರೆಯು 2017ರ ಜುಲೈ 9, ಗುರುಪೂರ್ಣಿಮೆಯಂದು ಕನ್ಯಾಕುಮಾರಿ ತಲುಪಲಿದ್ದು, 5 ವರ್ಷ ಪೂರೈಸಲಿರುವ ಈ ಸಂದರ್ಭದಲ್ಲಿ ಯಾತ್ರೆ ಮುಕ್ತಾಯಗೊಳ್ಳುವ ಸಾಧ್ಯತೆಯಿದೆ.

# ಊರವರೇ ಕಟ್ಟಿದ ಕೆರೆ ಇದು

ಮಳೆನೀರು ಸಂಗ್ರಹದ ಕುರಿತು ಮಾತನಾಡುವವರೇ ಹೆಚ್ಚು. ಆದರೆ ಅದನ್ನು ಕಾರ್ಯರೂಪಕ್ಕೆ ಇಳಿಸುವವರು ಅತಿವಿರಳ. ಚಿಕ್ಕಮಗಳೂರಿನ ಗ್ರಾಮವೊಂದರ ಜನರು 16 ಎಕರೆ ಜಮೀನಿನಲ್ಲಿ ಕೆರೆ ನಿರ್ಮಿಸಿ, ಅಲ್ಲಿ ಮಳೆನೀರು ಸಂಗ್ರಹಿಸುವ ಮೂಲಕ ಗ್ರಾಮಕ್ಕೆ ಬರ ಸುಳಿಯದಂತೆ ಮಾಡಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಯಗಟಿ ಹೋಬಳಿಯ ಸಿಂಗಟಗೆರೆ ಸಮೀಪದ ಪರ್ವತನಹಳ್ಳಿ 80 ಮನೆಗಳನ್ನು ಹೊಂದಿರುವ ಗ್ರಾಮ. ಈ ಊರಿನಲ್ಲಿ ಒಂದೇ ಒಂದು ಕೆರೆ ಇಲ್ಲ. ನೀರಿಗಾಗಿ ಪ್ರತಿ ಮನೆಯಲ್ಲೂ 4–5 ಕೊಳವೆ ಬಾವಿಗಳನ್ನು ಕೊರೆದಿದ್ದಾರೆ. ಆದರೆ ಫೆಬ್ರುವರಿಯಲ್ಲಿಯೇ ಬರಿದಾಗಿ, ಬೇಸಿಗೆಯಲ್ಲಿ ಹನಿ ನೀರಿಗೂ ಪರದಾಡುವ ಪರಿಸ್ಥಿತಿ. ಆದರೆ ಈಗ ಪರಿಸ್ಥಿತಿ ಸುಧಾರಿಸಿದೆ. ಇಲ್ಲಿ ಬರವಿಲ್ಲ. ಬೇಸಿಗೆಯಲ್ಲೂ ನೀರು ಸಿಗುತ್ತದೆ. ಕೃಷಿಭೂಮಿಗಳು ಹಸಿರುಣ್ಣುತ್ತಿವೆ.

ಇಂಥದ್ದೊಂದು ಪರಿವರ್ತನೆಗೆ ಕಾರಣವಾದದ್ದು ಇಲ್ಲಿಯ ಕೆರೆ! ಈ ಕೆರೆಯ ರೂವಾರಿಗಳು ಇಲ್ಲಿಯ ಗ್ರಾಮಸ್ಥರು. 2 ವರ್ಷಗಳ ಹಿಂದೆ ನಿರ್ಮಾಣವಾದ ಈ ಕೆರೆಯಲ್ಲಿ ಮಳೆಗಾಲದಲ್ಲಿ ನೀರು ತುಂಬುತ್ತದೆ. ಬೇಸಿಗೆಕಾಲದಲ್ಲಿ ಕೂಡ ಇದರಿಂದ ನೇರವಾಗಿ ನೀರೆತ್ತುವ ಕೆಲಸವನ್ನು ಮಾಡುತ್ತಿಲ್ಲ. ಈ ಕೆರೆಯಲ್ಲಿ ಸಂಗ್ರಹಗೊಂಡ ನೀರಿನಿಂದಾಗಿ ಇದೀಗ ಈ ಊರಿನ 80 ಮನೆಗಳಲ್ಲಿರುವ 400ರಿಂದ 500ರಷ್ಟು ಕೊಳವೆ ಬಾವಿಗಳಲ್ಲಿ ವರ್ಷದುದ್ದಕ್ಕೂ ನೀರು ದೊರೆಯುವಂತಾಗಿದೆ.

ಕೆರೆ ನಿರ್ಮಾಣದ ಹಿಂದೆ: ಬರಗಾಲದ ಪರಿಸ್ಥಿತಿಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ಊರಿನವರೆಲ್ಲ ಒಟ್ಟಾಗಿ ಕೆರೆ ನಿರ್ಮಿಸುವ ಕೆಲಸವನ್ನು ಕೈಗೆತ್ತಿಕೊಂಡರು. ಜಮಖಂಡಿ ತಾಲ್ಲೂಕಿನ ಚಿಕ್ಕಕೊಡಲಿ ಗ್ರಾಮದಲ್ಲಿ ಜನರೇ ನಿರ್ಮಿಸಿದ ಸಿದ್ದುನ್ಯಾಮೇಗೌಡ ಬ್ಯಾರೇಜ್‌ನ ಸಾಹಸಗಾಥೆ ಇವರಿಗೆ ಪ್ರೇರಣೆಯಾಯಿತು.

ಕೆರೆ ನಿರ್ಮಾಣಕ್ಕೆ ಬೇಕಾದ ಜಾಗವನ್ನು ಆಯ್ಕೆಮಾಡುವ, ಕೆಲಸವನ್ನು ಮಾಡಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಲು 16 ಮಂದಿಯ 'ಪರಿಸರ ಸ್ನೇಹಿ ಟ್ರಸ್ಟ್'ಅನ್ನು ಆರಂಭಿಸಲಾಯಿತು. ಪರ್ವತನಹಳ್ಳಿ ಬಳಿ 16 ಎಕರೆ ಸರಕಾರಿ ಭೂಮಿಯನ್ನು ಕೆರೆ ನಿರ್ಮಾಣಕ್ಕಾಗಿ ಗೊತ್ತುಪಡಿಸಿದರು. ಈಚಲು ಗಿಡದಿಂದ ತುಂಬಿದ್ದ 16 ಎಕರೆಯ ಕಳೆಗಳನ್ನು ತೆಗೆದು ಕೆರೆ ನಿರ್ಮಿಸುವ ಕೆಲಸಕ್ಕೆ ಈ ಊರಿನವರ ಎಂಟು ಟ್ರ್ಯಾಕ್ಟರ್, ಒಂದು ಜೆಸಿಬಿಯನ್ನು ಉಚಿತವಾಗಿ ಬಳಸಲಾಯಿತು. ಗ್ರಾಮ ಪಂಚಾಯಿತಿ, ಸರ್ಕಾರದ ಯಾವುದೇ ಅನುದಾನವನ್ನು ಬಯಸದೆ ನಿರ್ಮಿಸಲಾದ ಈ ಕೆರೆ ನಿರ್ಮಾಣದಲ್ಲಿ ಊರಿನ ಪ್ರತಿ ಮನೆಯವರೂ ಜೊತೆಯಾದರು.

ಈ ಕೆರೆ ನಿರ್ಮಾಣಕ್ಕೆ ಪ್ರತಿ ಮನೆಯವರೂ ತಮ್ಮ ಕೈಲಾದ ಧನಸಹಾಯ ಮಾಡಿದ್ದಾರೆ. 2013ರ ಡಿಸೆಂಬರ್‌ನಲ್ಲಿ ಪ್ರಾರಂಭಗೊಂಡು, ಕಳೆದ 2 ವರ್ಷಗಳಿಂದ ಈ ಕೆಲಸ ನಡೆಯುತ್ತಿದೆ. ಸುಮಾರು 15 ಅಡಿಯಷ್ಟು ಆಳವಾದ ಕೆರೆಯಲ್ಲಿ ಮಳೆನೀರು ಸಂಗ್ರಹವಾಗುತ್ತಿದೆ. ಇವರ ಪ್ರಯತ್ನದ ಫಲವಾಗಿ ಕಳೆದೆರಡು ವರ್ಷಗಳಿಂದ ಕೊಳವೆ ಬಾವಿಗಳಲ್ಲಿ ಸರ್ವಋತುಗಳಲ್ಲೂ ನೀರು ತುಂಬಿಕೊಂಡಿದೆ. 150 ರಿಂದ 350 ಅಡಿ ತೋಡಿದರೆ ಬಾವಿಯಲ್ಲಿ ನೀರು ಲಭಿಸುತ್ತಿದೆ.



# ಕೇರಳದಲ್ಲಿ 5 ವರ್ಷದಲ್ಲಿ 5793 ಮಂದಿ ಇಸ್ಲಾಂಗೆ ಮತಾಂತರ!

## ಕೇರಳ ಸರ್ಕಾರದ ಅಧಿಕೃತ ವರದಿ

ಕಳೆದ 5 ವರ್ಷಗಳ ಅವಧಿಯಲ್ಲಿ ಕೇರಳದಲ್ಲಿ 6000ಕ್ಕೂ ಅಧಿಕ ಮಂದಿ ಇಸ್ಲಾಂಗೆ ಮತಾಂತರಗೊಂಡಿದ್ದಾರೆ ಎಂಬ ಆತಂಕಕಾರಿ ಸುದ್ದಿ ಕೇರಳ ರಾಜ್ಯ ಗುಪ್ತಚರ ಇಲಾಖೆಯ ವರದಿಯಿಂದ ತಿಳಿದುಬಂದಿದೆ.

ಕೇರಳದ ಅಧಿಕೃತ ಮತಾಂತರ ಕೇಂದ್ರಗಳಾದ ಕೊಯಿಕ್ಕೋಡ್ ಥರಬಿಯಥುಲ್ ಇಸ್ಲಾಮ್ ಸಭಾ ಹಾಗೂ ಮಲ್ಲಪ್ಪುರಂನ ಪೊನ್ನಾನಿಯಮೊನುಸ್ಥಿಲ್ ಇಸ್ಲಾಂ ಸಭಾದಲ್ಲಿ 2011 ರಿಂದ 2015ರ ಅವಧಿಯಲ್ಲಿ 5793 ಮಂದಿಯನ್ನು ಇಸ್ಲಾಂಗೆ ಮತಾಂತರಗೊಳಿಸಲಾಗಿದೆ. ಇವರಲ್ಲಿ 4719 ಮಂದಿ ಹಿಂದುಗಳು ಹಾಗೂ 1074 ಮಂದಿ ಕ್ರೈಸ್ತರು. ಇನ್ನು ಬಹಳ ಆತಂಕಕಾರಿ ಸಂಗತಿಯೆಂದರೆ ಮತಾಂತರಗೊಂಡವರಲ್ಲಿ ಅರ್ಧಕ್ಕೂ ಅಧಿಕ ಮಂದಿ ಮಹಿಳೆಯರು ಮತ್ತು ಇವರಲ್ಲಿ ಶೇ. 76 ರಷ್ಟು ಭಾಗ 35 ವರ್ಷದೊಳಗಿನ ಹುಡುಗಿಯರು. ಈ ಸಂಖ್ಯೆ ಕೇವಲ ಅಧಿಕೃತ ಕೇಂದ್ರಗಳದ್ದಾಗಿದ್ದು, ಇನ್ನು ರಾಜ್ಯಾದ್ಯಂತ ಹರಡಿರುವ ಹತ್ತಾರು ಅನಧಿಕೃತ ಮತಾಂತರ ಕೇಂದ್ರಗಳಲ್ಲಿ ನೂರಾರು ಮತಾಂತರ ಪ್ರಕರಣಗಳು ನಡೆದಿವೆ. ಒಟ್ಟು ಸುಮಾರು 6000ಕ್ಕೂ ಅಧಿಕ ಮಂದಿ ಮತಾಂತರದ ಜಾಲಕ್ಕೆ ಬಲಿಯಾಗಿದ್ದಾರೆ ಎಂದು ಗುಪ್ತಚರ ಇಲಾಖೆಯ ಕೆಲ ತಿಂಗಳುಗಳ ಹಿಂದೆ ರಾಜ್ಯ ಸರ್ಕಾರಕ್ಕೆ ನೀಡಿದ ಅಧಿಕೃತ ವರದಿಯಲ್ಲಿ ತಿಳಿಸಿದೆ.

ಈಗಾಗಲೇ ಹಿಂದೂ ಜನಸಂಖ್ಯೆ ಶೇ. 40ಕ್ಕೆ ಇಳಿದಿರುವ ಕೇರಳದಲ್ಲಿ ಈ ಪ್ರಮಾಣದ ಮತಾಂತರ ನಡೆದಿರುವುದು ಆತಂಕದ ಹಾಗೂ ಗಂಭೀರ ವಿಷಯವಾಗಿದೆ. ಒಂದೆಡೆ ಅನ್ಯ ಮತೀಯ ಹೆಣ್ಣುಮಕ್ಕಳನ್ನು ಹೆರಿಗೆಯ ಯಂತ್ರವಾಗಿ ಬಳಸುತ್ತಿರುವ ಪ್ರಕರಣಗಳು ವರದಿಯಾಗುತ್ತಿದ್ದರೆ, ಇನ್ನೊಂದೆಡೆ ಜಗತ್ತನ್ನೇ ತಲ್ಲಣಗೊಳಿಸುತ್ತಿರುವ ಐಎಸ್‌ನಂತಹ ಭಯೋತ್ಪಾದಕ ಚಟುವಟಿಕೆಗಳಿಗೂ ಇವರನ್ನು ಬಳಸಿಕೊಳ್ಳುತ್ತಿರುವ ಪ್ರಕರಣಗಳು ಬೆಳಕಿಗೆ ಬರುತ್ತಿದೆ. ಈ ಬಗ್ಗೆ ಕೇರಳ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಗಂಭೀರ ಕ್ರಮ ತೆಗೆದುಕೊಳ್ಳಬೇಕಾದ ತುರ್ತು ಅಗತ್ಯವಿದೆ ಎಂಬುದು ಸಾರ್ವಜನಿಕರ ಕಳಕಳಿ.






ಕರ್ನಾಟಕದಲ್ಲಿ ಡಿವೈಎಸ್‌ಪಿ ಗಣಪತಿ ಮುಂತಾದ ಪೊಲೀಸ್ ಅಧಿಕಾರಿಗಳ ಹತ್ಯೆ ಖಂಡಿಸಿ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮಕ್ಕೆ ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ರಾಜ್ಯದ 82 ಕಡೆಗಳಲ್ಲಿ ಬೃಹತ್ ಪ್ರತಿಭಟನೆ ನಡೆಸಿತು.

## ಓದುಗರೇ ಗಮನಿಸಿ

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–04.
ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಮೊ: 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.